# ಕರ್ನಾಟಕ ಸರ್ಕಾರ

**ವಿಷಯ:-** ಶ್ರೀ ವೈ.ಕೃಷ್ಣರಾವ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ ಇವರಿಗೆ ಸಂಬಂಧಿಸಿದಂತೆ ವಿಳಂಬ ಮನ್ನಾ ಆದೇಶದ ಬಗ್ಗೆ.

**ಓದಲಾಗಿದೆ:-** 1) ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 373 ಸೇಶಿಕಾ 2015, ದಿನಾಂಕ:17.03.2016

2)ಸಹಾಯಕ ಕಾರ್ಯಪಾಲಕ ಇಂಜಿನಿಯರ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಶೃಂಗೇರಿ ಇವರ ಪತ್ರ ಸಂಖ್ಯೆ:ಗ್ರಾನೀಸ&ನೈ/ಉವಿ/ಶೃಂಗೇರಿ/76/2019-20, ದಿನಾಂಕ:23.10.2019

3) ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ 316 ಜಿಪಅ 2019, ದಿನಾಂಕ:07.01.2020

4) ಮಹಾಲೇಖಪಾಲರ ಕಚೇರಿಯ ಪತ್ರ ಸಂಖ್ಯೆ:ಜಿಇ02/17/ 2019-20/958, ದಿನಾಂಕ: 13.02.2020

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಅಧಿಸೂಚನೆಯಲ್ಲಿ ಶ್ರೀ ವೈ.ಕೃಷ್ಣರಾವ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ಹಾಲಿ ನಿವೃತ್ತ) ಇವರಿಗೆ ದಿನಾಂಕ:17.12.2014 ರಿಂದ 21.12.2014ರ ವರೆಗೆ ಸೇರುವಿಕೆ ಕಾಲವೆಂದು ಹಾಗೂ ದಿನಾಂಕ:22.12.2014 ರಿಂದ 13.01.2015ರ ವರೆಗೆ ಕಡ್ಡಾಯ ನಿರೀಕ್ಷಣಾ ಅವಧಿ ಎಂದು ಮಂಜೂರು ಮಾಡಲಾಗಿತ್ತು.

ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಶೃಂಗೇರಿ ಇವರು ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ದಿನಾಂಕ:23.10.2019ರ ಪತ್ರದಲ್ಲಿ

ಕಚೇರಿ ಸ್ಥಳಾಂತರ ಹಾಗೂ ಸಿಬ್ಬಂದಿಗಳ ಕೊರತೆಯಿಂದ ಶ್ರೀ ವೈ.ಕೃಷ್ಣರಾವ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರಿಗೆ ವೇತನ ಸಂದಾಯ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿ ಸರ್ಕಾರದದ ನಿರ್ದೇಶನ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಸರ್ಕಾರದ ಪತ್ರದಲ್ಲಿ ಶ್ರೀ ವೈ.ಕೃಷ್ಣರಾವ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ ರವರಿಗೆ ವೇತನ ಹಾಗೂ ಭತ್ಯೆಗಳನ್ನು ಬಿಡುಗಡೆಗೊಳಿಸಲು ಕ್ರಮ ಕ್ರಮ ಕೈಗೊಳ್ಳುವಂತೆ ಮಹಾಲೇಖಪಾಲರು, ಬೆಂಗಳೂರು ಇವರಿಗೆ ತಿಳಿಸಲಾಗಿತ್ತು. ಆದರೆ ಸದರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಪತ್ರದಲ್ಲಿ ಶ್ರೀ ವೈ.ಕೃಷ್ಣರಾವ್, ನಿವೃತ್ತ ಸ.ಕಾ.ಇಂ. ಇವರಿಗೆ ದಿನಾಂಕ:17.06.2016ರಂದು ವೇಥನ ಪ್ರಮಾಣ ಪತ್ರ ಒದಗಿಸಲಾಗಿದ್ದು. ವೇತನವನ್ನು ಸೆಳೆದಿಲ್ಲವೆಂದು, ಹೊಸದಾಗಿ ವೇತನ ಪ್ರಮಾಣ ಪತ್ರ ನೀಡಲು ಕರ್ನಾಟಕ ಆರ್ಥಿಕ ಸಂಹಿತೆ ಅನುಚ್ಛೇದ 22ರ ಪ್ರಕಾರ ಸಕ್ಷಮ ಪ್ರಾಧಿಕಾರವು ವಿಳಂಬ ಮನ್ನಾ ಆದೇಶ ಹೊರಡಿಸುವಂತೆ ತಿಳಿಸಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದೆ. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಶೃಂಗೇರಿ ಕಚೇರಿಯ ಸ್ಥಳಾಂತರ ಹಾಗೂ ಸಿಬ್ಬಂದಿಗಳ ಕೊರತೆಯಿಂದ ಶ್ರೀ ವೈ.ಕೃಷ್ಣರಾವ್, ನಿವೃತ್ತ ಸ.ಕಾ.ಇಂ. ಇವರು ವರ್ಗಾವಣೆ ಅವಧಿಯ ವೇತನವವನ್ನು ಸೆಳೆಯುವಲ್ಲಿ ವಿಳಂಬಿಸಿರುವ ಕಾರಣ ವಿಳಂಬ ಮನ್ನಾ ಮಾಡಲು ನಿರ್ಧರಿಸಿದೆ. ಆದ್ದರಿಂದ ಈ ಕೆಳಕಂಡ ಆದೇಶ:

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ316 ಎಸ್.ಎಸ್.ಕೆ.2020**
**ಬೆಂಗಳೂರು ದಿನಾಂಕ:30.04.2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಶ್ರೀ ವೈ.ಕೃಷ್ಣರಾವ್, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ ರವರಿಗೆ ಸೇರುವಿಕೆ ಕಾಲ ಹಾಗೂ ಕಡ್ಡಾಯ ನಿರೀಕ್ಷಣಾ ಅವಧಿ ಮಂಜೂರು ಮಾಡಿರುವ ಅವಧಿಗೆ ಸದರಿಯವರ ವೇತನ ಹಾಗೂ ಭತ್ಯೆಗಳನ್ನು ಸೆಳೆಯುಬಲ್ಲಿ ವಿಳಂಬವಾಗಿರುವುದನ್ನು ಕರ್ನಾಟಕ

ಆರ್ಥಿಕ ಸಂಹಿತೆ ಅನುಚ್ಛೇದ 22ರ ಪ್ರಕಾರ ವಿಳಂಬ ಮನ್ನಾ ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶನುಸಾರ ಮತ್ತು
ಅವರ ಹೆಸರಿನಲ್ಲಿ
(ಎಸ್.ರಂಗನಗೌಡ) 30/4/2020
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕಪತ್ರ ಅ ಮತ್ತು ಇ), ಕರ್ನಾಟಕ ಬೆಂಗಳೂರು
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ
3. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
4. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು
6. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ಉಪವಿಭಾಗ, ಶೃಂಗೇರಿ
7. ಶ್ರೀ ವೈ.ಕೃಷ್ಣರಾವ್, ನಂ.2-52, ನಿರ್ಮಿತಿ, ಮಹಾಕಾಳಿ ಮಾರ್ಗ, 3ನೇ ರೈಟ ಕ್ರಾಸ್, ಉಡುಪಿ-576103

ಪ್ರತಿಯನ್ನು:

1. ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಉಪಕಾರ್ಯದರ್ಶಿಗಳು
2. ಮೇಲ್ವಿಚಾರಕರು ಶಾಖಾ ರಕ್ಷಾಕಡತ